253 (425) ಶ್ರೀ ರೋಷನ್ ಬೇಗ್ ಆರ್. (ಜಯಮಹಲ್)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಪಾಕಿಸ್ತಾನ ದೇಶದ ಪ್ರಜೆಗಳು ಬೆಂಗಳೂರಿನಲ್ಲಿ ಉಳಿದುಕೊಂಡಿರುವುದು ನಿಜವೇ;

ಆ. ಹಾಗಾದ್ದಲ್ಲಿ, ಎಷ್ಟು ಜನ ಪಾಕಿಸ್ತಾನಿಯರನ್ನು ಇದುವರೆಗೆ ಪತ್ತೆ ಹಚ್ಚಲಾಗಿದೆ;

ಇ. ಅವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ. ಇವರು ಯಾವ ಉದ್ದೇಶಕ್ಕಾಗಿ ಬೆಂಗಳೂರಿಗೆ ಬಂದಿರುತ್ತಾರೆ ಮತ್ತು ಇಲ್ಲೆ ಉಳಿದುಕೊಳ್ಳಲು ಕಾರಣಗಳೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ. ನಿಜ.

ಆ. ಬೆಂಗಳೂರಿನಲ್ಲಿರುವ ಪಾಕಿಸ್ತಾನಿ ಪ್ರಜೆಗಳು ಅಧಿಕೃತವಾಗಿ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಅವರು ಅಧಿಕೃತವಾಗಿ ವಾಸವಾಗಿರುವುದರಿಂದ ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ.

ಈ. ಬೆಂಗಳೂರಿನಲ್ಲಿ ಒಟ್ಟು 60 ಜನ ಪಾಕಿಸ್ತಾನಿ ರಾಷ್ಟ್ರೀಯರು ವೀಸಾ ವಿಸ್ತರಣೆಯನ್ನು ಪಡೆದು ಅಧಿಕೃತವಾಗಿ ವಾಸವಿರುತ್ತಾರೆ. ಇದರಲ್ಲಿ ಭಾರತೀಯರನ್ನು ವಿವಾಹವಾಗಿರುವ ಪಾಕಿಸ್ತಾನಿ ಪ್ರಜೆಗಳು ಭಾರತೀಯ ಪೌರತ್ವವನ್ನು ಪಡೆದು ಇಲ್ಲಿಯೇ ಉಳಿಯುವ ಕಾರಣದಿಂದ ಅರ್ಜಿ ಸಲ್ಲಿಸಿರುತ್ತಾರೆ. ಇನ್ನು ಕೆಲವರು ವಿದ್ಯಾರ್ಥಿಗಳಾಗಿರುತ್ತಾರೆ. ಹಾಗೂ ಹಿಂದೂ ಅಲ್ಪಸಂಖ್ಯಾತ ಮತ್ತು ವಿವಾದ ವಿಚ್ಛೇದನ ಪಡೆದ ಪಾಕಿಸ್ತಾನಿ ತಾಯಿಯ ಮಕ್ಕಳು ಇಲ್ಲೇ ಉಳಿಯುವ ಉದ್ದೇಶವನ್ನು ಹೊಂದಿರುತ್ತಾರೆ.

254 (427) ಶ್ರೀ ರೋಷನ್ ಬೇಗ್ ಆರ್. (ಜಯಮಹಲ್)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬೆಂಗಳೂರಿನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಆವರಣದಲ್ಲಿ ಇತ್ತೀಚೆಗೆ ಜರುಗಿದ ದಾಳಿಯ ಸಂಬಂಧದಲ್ಲಿ ಇದುವರೆವಿಗೆ ಎಷ್ಟು ಜನ ಭಯೋತ್ಪಾದಕರನ್ನು ಸೆರೆ ಹಿಡಿಯಲಾಗಿದೆ;